ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 20–10–2021

# ಮಾಧ್ಯಮ ಆಹ್ವಾನ

## MEDIA INVITATION

**21–10–2021**

1. ಪೊಲೀಸ್ ಸಂಸ್ಮರಣ ದಿನಾಚರಣೆ

ಮುಖ್ಯ ಅತಿಥಿಗಳು

ಬಸವರಾಜ ಎಸ್ ಬೊಮ್ಮಾಯಿ,
ಮುಖ್ಯಮಂತ್ರಿಗಳು,ಕರ್ನಾಟಕ ಸರ್ಕಾರ,

ಅಧ್ಯಕ್ಷತೆ:
ಆರಗ ಜ್ಞಾನೇಂದ್ರ,
ಮಾನ್ಯ ಗೃಹ ಸಚಿವರು, ಕರ್ನಾಟಕ ಸರ್ಕಾರ.

ದಿನಾಂಕ: 21–10–2021, ಗುರುವಾರ, ಬೆಳಿಗ್ಗೆ 8–00 ಗಂಟೆಗೆ

ಸ್ಥಳ: ಕೇಂದ್ರ ಸ್ಥಾನದ ಹುತಾತ್ಮರ ಉದ್ಯಾನವನ, ನಗರ ಸಶಸ್ತ್ರ ಮೀಸಲು ಪಡೆ, ಮೈಸೂರು ರಸ್ತೆ, ಬೆಂಗಳೂರು

ಸೂಚನೆ: ಮಾಧ್ಯಮದವರಿಗಾಗಿ ಪೊಲೀಸ್ ಪ್ರಧಾನ ಕಛೇರಿ ಮತ್ತು ಪೊಲೀಸ್ ಆಯುಕ್ತರ ಕಛೇರಿ ಬೆಂಗಳೂರು ನಗರ ಇಲ್ಲಿ ವಾಹನ ವ್ಯವಸ್ಥೆ ಮಾಡಲಾಗಿದೆ. ವಾಹನವು ಬೆಳಿಗ್ಗೆ 7.15 ಗಂಟೆಗೆ ಸದರಿ ಸ್ಥಳದಿಂದ ಹೊರಡುವುದು.

ಹೆಚ್ಚಿನ ಮಾಹಿತಿಗಾಗಿ: ಬಿ.ಎನ್. ನರಸಿಂಹಮೂರ್ತಿ, ಸಾರ್ವಜನಿಕ ಸಂಪರ್ಕಾಧಿಕಾರಿ, ದೂರವಾಣಿ ಸಂ. 9480800728 ಅಥವಾ 080–22943045 ಇವರನ್ನು ಸಂಪರ್ಕಿಸುವುದು

**2. ಪೊಲೀಸ್ ಸಂಸ್ಮರಣಾ ದಿನಾಚರಣೆ – "ಸ್ಮರಣಾಂಜಲಿ"**
**ಪೊಲೀಸ್ ಅಮ್ಮರವೀರರ ಭಾವಚಿತ್ರ ಪ್ರದರ್ಶನ – ಉದ್ಘಾಟನಾ ಸಮಾರಂಭ**
**ಉದ್ಘಾಟನೆ :**

**ಆರಗ ಜ್ಞಾನೇಂದ್ರ,**
**ಮಾನ್ಯ ಗೃಹ ಸಚಿವರು, ಕರ್ನಾಟಕ ಸರ್ಕಾರ.**
**ಉಪಸ್ಥಿತಿ :**
**ಡಾ. ರಜನೀಶ್ ಗೋಯಲ್. ಭಾ.ಆ.ಸೇ**
**ಅಪರ ಮುಖ್ಯ ಕಾರ್ಯದರ್ಶಿಗಳು**

**ಅಧ್ಯಕ್ಷತೆ :**
**ಪ್ರವೀಣ್ ಸೂದ್, ಭಾ.ಪೊ.ಸೇ.**
**ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ**

**ದಿನಾಂಕ: 21–10–2021, ಗುರುವಾರ, ಸಂಜೆ: 4–00 ಗಂಟೆಗೆ**

**ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಂಗಳೂರು.**

**ಹೆಚ್ಚಿನ ಮಾಹಿತಿಗಾಗಿ: ಬಿ.ಎನ್. ನರಸಿಂಹಮೂರ್ತಿ, ಸಾರ್ವಜನಿಕ ಸಂಪರ್ಕಾಧಿಕಾರಿ, ದೂರವಾಣಿ ಸಂ. 9480800728 ಅಥವಾ 080–22943045 ಇವರನ್ನು ಸಂಪರ್ಕಿಸುವುದು**

# ಪತ್ರಿಕಾ ಪ್ರಕಟಣೆ

**PRESS RELEASE**

## ವಾಲ್ಮೀಕಿ ಸಮುದಾಯದ ಶ್ರೇಯೋಭಿವೃದ್ಧಿಗೆ ಸರ್ಕಾರ ಬದ್ಧ : ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

**ಬೆಂಗಳೂರು, 20ನೇ ಅಕ್ಟೋಬರ್ 2021(ಕರ್ನಾಟಕ ವಾರ್ತೆ):**

ವಾಲ್ಮೀಕಿ ಸಮುದಾಯದ ಶ್ರೇಯೋಭಿವೃದ್ಧಿಗೆ ನ್ಯಾಯ ಮತ್ತು ಅವಕಾಶಗಳನ್ನು ಕೊಡುವ ನಿಟ್ಟಿನಲ್ಲಿ ಸರ್ಕಾರ ಈ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ ಕಾರ್ಯೋನ್ಮುಖವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಹರ್ಷಿ ವಾಲ್ಮೀಕಿ ಜಯಂತಿಯ ಅಂಗವಾಗಿ ಇಂದು ಶ್ರೀ ಮಹರ್ಷಿ ವಾಲ್ಮೀಕಿ ತಪೋವನದಲ್ಲಿರುವ (ಶಾಸಕರ ಭವನ ಮುಂಭಾಗ) ಮಹರ್ಷಿ ವಾಲ್ಮೀಕಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಮುಖ್ಯಮಂತ್ರಿಗಳು 21 ನೇ ಶತಮಾನದಲ್ಲಿ ವಾಲ್ಮೀಕಿ ಜನಾಂಗವೂ ಕೂಡ ಎಲ್ಲರಂತೆ ಮುಂದೆ ಬರಬೇಕು. ವಿದ್ಯೆ, ಉದ್ಯೋಗ ಮುಂತಾದ ಎಲ್ಲ ಕ್ಷೇತ್ರದಲ್ಲಿ ಮುಂದುವರಿಯಬೇಕು. ಬೆಳೆಯುತ್ತಿರುವ ಜನಸಂಖ್ಯೆ ಮತ್ತು ಆಶೋತ್ತರಗಳ ಬಗ್ಗೆ ಸಮಾಜ ಜಾಗೃತವಾಗಿದೆ ಎಂದರು.

ಮಹರ್ಷಿ ವಾಲ್ಮೀಕಿ ಪರಿವರ್ತನೆಯ ಹರಿಕಾರರು. ವ್ಯಕ್ತಿಯಲ್ಲಿ ಬದಲಾವಣೆಯಾದರೆ ದೈವತ್ವದ ಹಂತವನ್ನು ತಲುಪಲು ಸಾಧ್ಯ ಎನ್ನುವುದನ್ನು ವಾಲ್ಮೀಕಿ ನಿರೂಪಿಸಿದ್ದಾರೆ. ಮಹರ್ಷಿ ವಾಲ್ಮೀಕಿ ಅವರು ಜಗತ್ತು ಕಂಡ ಅತ್ಯಂತ ಶ್ರೇಷ್ಠ ಮಹರ್ಷಿ ಮತ್ತು ಕವಿಗಳು. ಅವರು ರಚಿಸಿರುವ

ರಾಮಾಯಣ ವಿಶ್ವದ ಹತ್ತು ಶ್ರೇಷ್ಠ ಸಾಹಿತ್ಯದಲ್ಲಿ ಒಂದು. ರಾಮಾಯಣ ಇಡೀ ಭಾರತ ದೇಶದ ಪ್ರತಿಯೊಬ್ಬರ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಆದರ್ಶವಾಗಿದೆ. ನಾವೆಲ್ಲರೂ ಅದರಿಂದ ಜೀವನದ ಪಾಠವನ್ನು ಕಲಿಯುವಂತಿದೆ ಎಂದರು.

ವಾಲ್ಮೀಕಿ ಸಮುದಾಯ ತನ್ನ ಸ್ವಾಭಿಮಾನದ ಬದುಕನ್ನು ಕಾಯಕದ ಮೂಲಕ ನಡೆಸಿಕೊಂಡು ಬಂದಿದೆ. ದೇಶವನ್ನು ಕಟ್ಟಲು, ಕಾಯಲು ಸ್ವತಂತ್ರ ಹೋರಾಟದಲ್ಲಿ ಹಾಗೂ ನಮ್ಮ ಧರ್ಮದ ರಕ್ಷಣೆಯಲ್ಲಿಯೂ ಮುಂಚೂಣಿಯಲ್ಲಿದ್ದಾರೆ. ಏಕಲವ್ಯ, ಒನಕೆ ಓಬವ್ವ, ಸಿಂಧೂರ ಲಕ್ಷ್ಮಣ, ಹಲಗಲಿ ಬೇಡರು, ವಿಜಯನಗರ ರಕ್ಷಿಸಿದ ಸುರಪುರ ರಾಜರು ಸೇರಿದಂತೆ ಪ್ರಮುಖರ ಪರಂಪರೆ ಇದೆ. ಇದನ್ನು ಅರ್ಥಮಾಡಿಕೊಂಡು ಅವರ ಇತಿಹಾಸ ಪರಂಪರೆಗೆ ಗೌರವ ಬರುವ ರೀತಿಯಲ್ಲಿ ಕೆಲಸ ಮಾಡಬೇಕಿದೆ ಎಂದು ಅಭಿಪ್ರಾಯಪಟ್ಟರು. ಈ ಸಮಯದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಸಾರಿಗೆ ಸಚಿವ ಬಿ. ಶ್ರೀರಾಮುಲು ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಮನುಕುಲ ಇರುವವರೆಗೂ ವಾಲ್ಮೀಕಿ ಚಿಂತನೆಯು ಜೀವಂತವಾಗಿರುತ್ತದೆ – ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

**ಬೆಂಗಳೂರು, 20ನೇ ಅಕ್ಟೋಬರ್ 2021(ಕರ್ನಾಟಕ ವಾರ್ತೆ):**

ಮನುಕುಲ ಇರುವವರೆಗೂ, ಮಹರ್ಷಿ ವಾಲ್ಮೀಕಿಯವರ ಆದರ್ಶಗಳು, ತತ್ವಗಳು, ಚಿಂತನೆಗಳು ಜೀವಚಿತವಾಗಿರುತ್ತವೆ ಎಂದು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ತಿಳಿಸಿದರು.

ಇಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಪ್ರಶಸ್ತಿ ಪ್ರದಾನ ಸಮಾರಂಭದ ಉದ್ಘಾಟನೆ ಮಾಡಿ ಮಾತನಾಡಿದ ಮುಖ್ಯಮಂತ್ರಿಗಳು, ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಮಾಡುವ ಮುಖಾಂತರ ಎಲ್ಲಕಿಂತ ಹೆಚ್ಚಾಗಿ ನಮ್ಮನ್ನು ನಾವೇ ಮೌಲ್ಯಾಪನೆ ಮಾಡುವಂತಹದು ಅರ್ಥಪೂರ್ಣ ಆಚರಣೆಯಾಗಿದೆ ಎಂದು ತಿಳಿಸಿದರು.

ಇಂದು ನಾವೆಲ್ಲರೂ ಆತ್ಮ ವಿಶ್ವಾಸದೊಂದಿಗೆ ಮುನ್ನಡೆಯುವ ದಿನವಾಗಿದೆ. ವಾಲ್ಮೀಕಿ ಎಂದರೆ ಜಾಗೃತಿ. ಯಾವಾಗ ಮನುಷ್ಯ ಜಾಗೃತನಾಗುತ್ತಾನೋ, ಜೀವನದ ಬಗ್ಗೆ ಅರಿವು ಮೂಡುತ್ತದೆಯೋ ಆಗ ಮನುಷ್ಯರಲ್ಲಿ ಪರಿವರ್ತನೆ ಪ್ರಾರಂಭವಾಗುತ್ತದೆ. ಪರಿವರ್ತನೆ ಎಂಬುದು ಜಗತ್ತಿನ ನಿಯಮವಾಗಿದ್ದು, ಇದು ನಿರಂತರವಾಗಿ ನಡೆಯುವ ಪ್ರಕ್ರಿಯೆ. ಮೊದಲು ಮನುಷ್ಯನ ಮನಸ್ಸಿನಲ್ಲಿ ಪರಿವರ್ತನೆಯಾದರೆ, ಪರಿಸರದಲ್ಲಿ ಬದಲಾವಣೆಯಾಗುತ್ತದೆ. ನಾವು ಚಿಂತನೆಗಳ ಮುಖಾಂತರ ಸಮಾಜದಲ್ಲಿ ಹಾಗೂ ನಾಡಿನಲ್ಲಿ ಬದಲಾವಣೆ ತರಬೇಕು. ಒಬ್ಬ ಮನುಷ್ಯನಲ್ಲಿ ಬದಲಾವಣೆ ಎಷ್ಟು ಮುಖ್ಯ ಎಂಬುದನ್ನು ತಿಳಿದುಕೊಳ್ಳಬೇಕು. ಶ್ರೇಷ್ಠರಲ್ಲಿ ಶ್ರೇಷ್ಠರಾದ ಮಹರ್ಷಿ ವಾಲ್ಮೀಕಿ ಅವರು ಸಾಹಿತ್ಯದ ಮುಖಾಂತರ, ಶ್ರೇಷ್ಠ ವ್ಯಕ್ತಿತ್ವ ಹೊಂದಿ ಮಹರ್ಷಿ ವಾಲ್ಮೀಕಿಯವರದು.

ಜಗತ್ತಿನಲ್ಲಿ ಮೂಲಭೂತ ಬದಲಾವಣೆಯು ಒಂದು ದೇಶದಿಂದ, ಸಂಸ್ಥೆಯಿಂದ ಅಥವಾ ಸೈನ್ಯದಿಂದ ಆಗಲಿಲ್ಲ. ಜಗತ್ತಿನಲ್ಲಿ ಮೂಲಭೂತ ಬದಲಾಣೆ ತರುವ ಶಕ್ತಿ ವ್ಯಕ್ತಿತ್ವದಲ್ಲಿದೆ. ವ್ಯಕ್ತಿತ್ವದಿಂದ ಮಾತ್ರ ಸಾಧ್ಯ ಭಗವಂತನನ್ನು ತನ್ನ ಅರಿವಿನ ಮೂಲಕ ಯಾರು ಕಾಣುತ್ತಾರೊ, ಅವರು ಶಕ್ತಿಯನ್ನು ಪಡೆದುಕೊಳ್ಳುತ್ತಾರೆ. ಮಹರ್ಷಿ ವಾಲ್ಮೀಕಿಯವರು ಕಾಲಾತೀತರಾದವರು. ಇಡೀ ವಿಶ್ವದಲ್ಲಿ ಶ್ರೇಷ್ಠ 10 ಕಾವ್ಯಗಳಲ್ಲಿ ಪ್ರಮುಖವಾಗಿದ್ದು ರಾಮಾಯಣ.

ಶ್ರೀರಾಮನು ಸಹೋದರನಾಗಿ, ಪತಿಯಾಗಿ, ಮಗನಾಗಿ, ರಾಜನಾಗಿ ಹೇಗೆ ಇರಬೇಕೆಂಬುದನ್ನು ತಿಳಿಸುತ್ತಾರೆ. ಪರಿಪೂರ್ಣತೆಯನ್ನು ಪಡೆದ ವ್ಯಕ್ತಿ ರಾಜ್ಯವಾಳಿದಾಗ ರಾಮರಾಜ್ಯವಾಗುತ್ತದೆ ಅಂತಹ ರಾಮಾಯಣವನ್ನು ಬರೆದು ಭರತ ವರ್ಷಕ್ಕೆ ಸಂಸ್ಕೃತಿ ನೀಡಿದವರು ಮಹರ್ಷಿ ವಾಲ್ಮೀಕಿ. ಒಬ್ಬ ವ್ಯಕ್ತಿ ಪರಿಪೂರ್ಣನಾಗಬೇಕಾದರೆ ಧ್ಯಾನ, ಜ್ಞಾನ ಎರಡು ದೊಡ್ಡ ಶಕ್ತಿಗಳು ಪ್ರಮುಖವಾದವು. ಅವುಗಳನ್ನು ಪಡೆದು ಮುಂದೆ ಹೋಗಬೇಕು ಎಂಬುದು ಪರಮ ಪೂಜ್ಯ ಪ್ರಸನ್ನಾನಂದಪುರಿ ಅವರದಾಗಿದೆ. ವೈಚಾರಿಕತೆ ಹೋರಾಟಗಳನ್ನು ಮಾಡಿದ್ದಾರೆ. ಅವರ ವೈಚಾರಿಕತೆ ಹಾಗೂ ಹೋರಾಟಕ್ಕೆ ಸದಾ ಕಾಲ ಅವರ ಜೊತೆ ನಿಂತಿದ್ದೇವೆ. ಹಲವಾರು ಸಂದರ್ಭಗಳಲ್ಲಿ ಚರ್ಚೆ ಮಾಡಿದ್ದೇವೆ ಎಂದರು.

ಶಿಕ್ಷಣ, ಉದ್ಯೋಗ, ಸಬಲೀಕರಣ ಮೂಲಕ ಪ್ರಬಲವಾದ ನಂಬಿಕೆ. ವಿಶೇಷವಾಗಿ ಎಸ್.ಸಿ. ಎಸ್.ಟಿ ಹೆಣ್ಣು ಮಕ್ಕಳು ಆರ್ಥಿಕವಾಗಿ ಪ್ರಬಲರಾಗಲು ಸಹಾಯ ಸಹಕಾರವನ್ನು ಮಾಡಬೇಕು. ಎಲ್ಲಾ ಸಮುದಾಯಗಳ ಆಶೋತ್ತರ ಹೆಚ್ಚಾಗಿದೆ. ನರೇಂದ್ರ ಮೋದಿ ಸಂವಿಧಾನದಲ್ಲಿ ತಿದ್ದುಪಡಿ ತರಲು ಆರ್ಥಿಕವಾಗಿ ಹಿಂದುಳಿದವರಿಗೆ ಶೇಕಡ 10% ಮೀಸಲಾತಿ ನೀಡಬೇಕು ಎಂಬ ಮಹತ್ವದ ತೀರ್ಮಾನವನ್ನು ಮಾಡಿದ್ದಾರೆ. ಎಲ್ಲ ಸಮುದಾಯದ ಆಶೋತ್ತರಕ್ಕೆ ನ್ಯಾಯ ಒದಗಿಸುವ ಪ್ರಯತ್ನ ನಡೆಸಲಾಗುವುದು ಎಂದು ತಿಳಿಸಿದರು.

ನಂತರ 11 ಮಹನೀಯರಿಗೆ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ ಮಾಡಿದರು:

2020-21ನೇ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಬೆಳಗಾವಿ ವಿಭಾಗದ ಡಾ.ಕೆ.ಆರ್. ಪಾಟೀಲ್ ಸಾಮಾಜಿಕ ಕ್ಷೇತ್ರದಲ್ಲಿ, ಬೆಂಗಳೂರು ವಿಭಾಗದ ಡಾ.ಬಿ.ಎಲ್.ವೇಣು ಸಾಹಿತ್ಯ ಕ್ಷೇತ್ರದಲ್ಲಿ, ಮೈಸೂರು ವಿಭಾಗದ ಶ್ರೀಮತಿ ಗೌರಿ ಕೊರಗ ಸಾಮಾಜಿಕ ಕ್ಷೇತ್ರದಲ್ಲಿ, ಕಲಬುರಗಿ ವಿಭಾಗದ  ಮಾರಪ್ಪ ನಾಯಕ ಸಂಘಟನಾ ಕ್ಷೇತ್ರದಲ್ಲಿ , ಬೆಂಗಳೂರು ಕೇಂದ್ರ ಸ್ಥಾನದಿಂದ ತಿಪ್ಪೇಸ್ವಾಮಿ ಹಚ್.(ಸಿರಿಗೆರೆ ತಿಪ್ಪೇಶ್) ಸಾಮಾಜಿಕ ಸೇವೆ ಕ್ಷೇತ್ರದಲ್ಲಿ ಹಾಗೂ  2021-22 ನೇ ಸಾಲಿನ ಶ್ರೀ ಮಹರ್ಷಿ ಪ್ರಶಸ್ತಿಗೆ ಬೆಂಗಳೂರು ವಿಭಾಗದ ಕೆ.ಸಿ. ನಾಗರಾಜು ಸಾಮಾಜಿಕ ಕ್ಷೇತ್ರ, ಬೆಳಗಾವಿ ವಿಭಾಗದ ಲಕ್ಷ್ಮೀ ಗಣಪತಿ ಸಿದ್ದಿ ಇತರೆ ಕ್ಷೇತ್ರ, ಮೈಸೂರು ವಿಭಾಗದ ಪ್ರೊ.ಎಸ್.ಆರ್. ನಿರಂಜನ ಶಿಕ್ಷಣ ಕ್ಷೇತ್ರ, ಕಲಬುರಗಿ ವಿಭಾಗ ಭಟ್ಟಹಳ್ಳಿ ಗೂಳಪ್ಪ ಇತರೆ ಕ್ಷೇತ್ರ, ಬೆಂಗಳೂರು ಕೇಂದ್ರ ಸ್ಥಾನ ವೈ ಅಶ್ವತ್ಥರಾಮಯ್ಯ ಸಮಾಜ ಸೇವೆ ಕ್ಷೇತ್ರ, ಕಲಬುರಗಿ ವಿಭಾಗ ಬಿ.ಎಸ. ಜಂಭಯ್ಯ ನಾಯಕ ಸಮಾಜ ಸೇವೆ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಪ್ರಶಸ್ತಿ ಪುರಸ್ಕೃತರಿಗೆ,  ಪ್ರಶಸ್ತಿ ಫಲಕ, 20 ಗ್ರಾಂ ಚಿನ್ನದ ಪದಕ ಹಾಗೂ 5 ಲಕ್ಷ ನಗದು ಮೊತ್ತವನ್ನು ನೀಡಲಾಯಿತು.

ಇದೇ ಸಂದರ್ಭದಲ್ಲಿ ಬನಶಂಕರಿ 6ನೇ ಹಂತದ ಬಡಾವಣೆಯಲ್ಲಿನ ವಾಲ್ಮೀಕಿ ಭವನವನ್ನು ವರ್ಚ್ಯುವಲ್ ಮೂಲಕ ಮುಖ್ಯಮಂತ್ರಿಗಳು ಲೋಕಾರ್ಪಣೆ ಮಾಡಿದರು.

**TRI Aromatic Coffee, TRI Filter Coffee, TRI Pepper, FOLKLORE Cofee, FOLKLORE Pepper, VANASIRI Honey** ಬುಡಕಟ್ಟು ಉತ್ಪನ್ನಗಳ ಬಿಡುಗಡೆ ಮುಖ್ಯಮಂತ್ರಿಗಳು ಮಾಡಿದರು.

ರೈತ ಉತ್ಪಾದಕರ ಸಂಸ್ಥೆಗಳಾದ ನಾಗಪುರ ಬುಡಕಟ್ಟು ರೈತ ಉತ್ಪಾದಕರ ಕಂಪನಿ ನಿಯಮಿತ, ಶೆಟ್ಟಹಳ್ಳಿ ಹಾಗೂ ಹೆಬ್ಬಾಳದ ಬುಡಕಟ್ಟು ರೈತ ಉತ್ಪಾದಕರ ಕಂಪನಿ ನಿಯಮಿತ, ಬಸವನಗಿರಿ ಬುಡಕಟ್ಟು ರೈತ ಉತ್ಪಾದಕರ ಕಂಪನಿ ನಿಯಮಿತ , ಮಾಸ್ತಿ ಗುಡಿ ಬುಟಕಟ್ಟು ರೈತ ಉತ್ಪಾದಕರ ಕಂಪನಿ ನಿಯಮಿತಗಳನ್ನು ಮುಖ್ಯಮಂತ್ರಿಗಳು ಉದ್ಘಾಟಿಸಿದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸಾಮಾಜಿಕ ಮಾಧ್ಯಮದ ಫೇಸ್ ಬುಕ್, ಟ್ವಿಟ್ಟರ್, ಇನ್‌ಸ್ಟಾಗ್ರಾಮ್, ಯೂಟ್ಯೂಬ್ ಚಾನಲ್ ಬಿಡುಗಡೆ ಮಾಡಿದರು.

ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ, ದೇಶವು ರಾಮರಾಜ್ಯವಾಗಬೇಕೆಂಬ ಪರಿಕಲ್ಪನೆಯಿಂದ ರಾಮಾಯಣವನ್ನು ಮಹರ್ಷಿ ವಾಲ್ಮೀಕಿ ಬರೆದರು. ಸಮಾಜದಲ್ಲಿ ಧರ್ಮ ಉಳಿಯಬೇಕು ಹಾಗೂ ಜೀವನದಲ್ಲಿ ಕಷ್ಟ ಸುಖ, ಸಮಾಜದ ಮೌಲ್ಯವನ್ನು ರಾಮಾಯಣವು ಒಳಗೊಂಡು ನಮ್ಮೆಲ್ಲರಿಗೂ ಸ್ಫೂರ್ತಿದಾಯಕವಾಗಿದೆ ಎಂದು ಸಚಿವರು ತಿಳಿಸಿದರು.

ಪರಿಶಿಷ್ಟ ಪಂಗಡಗಳ ಇಲಾಖೆಗೆ ಪ್ರತ್ಯೇಕ ಸಚಿವಾಲಯದ ಬೇಡಿಕೆಯನ್ನು ಮುಖ್ಯಮಂತ್ರಿಗಳು ಪೂರೈಸಿದ್ದಾರೆ. ಪರಿಶಿಷ್ಟ ವರ್ಗದ ಸಮುದಾಯದ ರೈತರಿಗಾಗಿ ಕಾಫಿ ಮತ್ತು ಕರಿಮೆಣಸಿನ ಸಮಗ್ರ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಬುಡಕಟ್ಟು ಸಮುದಾಯದ ರೈತರು ಕೃಷಿ ಹಾಗೂ ಸಂಬಂಧಿಸಿದ ಚಟುವಟಿಕೆಗಳಲ್ಲಿ ಪಾಲ್ಗೊಂಡ ರೈತರಿಗೆ ತಾಂತ್ರಿಕ ಸಲಹೆ, ಸಾಮರ್ಥ್ಯ

ಬಲವರ್ಧನೆ, ಉತ್ತಮ ಗುಣಮಟ್ಟದ ಪರಿಕರಗಳನ್ನು ಪೂರೈಸುವುದು, ಬೆಳೆದ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮುಖಾಂತರ ನೇರ ಮಾರುಕಟ್ಟೆ ಕಲ್ಪಿಸಿ ರೈತ ಉತ್ಪಾದಕ ಸಂಸ್ಥೆಗಳ ಸದಸ್ಯ ರೈತರನ್ನು ಹೆಚ್ಚು ಸಬಲರನ್ನಾಗಿ ಮಾಡುವುದು ಮತ್ತು ರೈತರ ಆರ್ಥಿಕ ಮಟ್ಟವನ್ನು ಬಲಪಡಿಸುವುದಾಗಿದೆ ಎಂದು ಸಚಿವರು ತಿಳಿಸಿದರು.

ಪರಿಶಿಷ್ಟ ಜನರ ಯೋಜನೆಗಳಿಗೆ  ಏಳು ಸಾವಿರ ಕೋಟಿ ಅನುದಾನ ನೀಡಿದ್ದಾರೆ. ಮೀಸಲಾತಿ ವಿಚಾರದಲ್ಲಿ ಯಾವುದೇ ದ್ವಂದ್ವವಿಲ್ಲದೆ ಒಳ್ಳೆಯ ನಿರ್ಧಾರವನ್ನು ಮುಖ್ಯಮಂತ್ರಿಗಳು ತೆಗೆದುಕೊಳ್ಳುತ್ತಾರೆಂಬ ವಿಶ್ವಾಸವಿದೆ. ಪರಿಶಿಷ್ಟ ವರ್ಗಗಳ ಅಭಿವೃದ್ಧಿಗಾಗಿ ಸರ್ಕಾರ ಬದ್ದವಾಗಿದೆ ಎಂದರು.

ಸಮಾರಂಭದಲ್ಲಿ ದಾವಣಗೆರೆ ಜಿಲ್ಲೆಯ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮಿಜಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಡಾ.ಎನ್. ನಾಗಾಂಬಿಕಾ ದೇವಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕ ಪಿ.ಎಸ್. ಕಾಂತರಾಜು, ಶಾಸಕರು, ಗಣ್ಯರು, ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.